ಸಿ.ಮಿಸಿಲೆ ನಂ. 1/2022

ಪಿ.ಡಬ್ಲ್ಯೂ: 1

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 20-08-2024 ರಂದು ಬೊಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ವೈ ಎ ನ್ಯಾಯವಾದಿರವರಿಂದಃ**

ಸರ್ವೆ ನಂಬರ್ 27 ಒಟ್ಟು 01-05-00 ಕ್ಷೇತ್ರ ಇರುತ್ತದೆ . ಸಾಕ್ಷಿಯು ಮುಂದುವರಿದು ಅದು ಹಿಸ್ಸೆಯಾಗಿ ಸರ್ವೆ ನಂಬರ್ 27/1 ರಲ್ಲಿ ಪ್ರತಿವಾದಿಯವರಿಗೆ 00-16-00 ಕ್ಷೇತ್ರ ಬಂದಿರುತ್ತದೆ ಎಂದು ನುಡಿಯುತ್ತಾರೆ . ಸರ್ವೆ ನಂಬರ್ 27/1 ರ ಪೂರ್ವಕ್ಕೆ ಸರ್ವೆ ನಂಬರ್ 27/2 , ಪಶ್ಚಿಮಕ್ಕೆ ಸರ್ವೆ ನಂಬರ 28 , ಉತ್ತರಕ್ಕೆ ಹಾಗೂ , ದಕ್ಷಿಣಕ್ಕೆ ಬೆಟ್ಟ ಬರುತ್ತದೆ . ದಾವಾ ಕಾಲುದಾರಿಯು ಸರ್ವೆ ನಂಬರ್ 27 ರ ಮಧ್ಯದಲ್ಲಿ ಬರುತ್ತದೆ . ಸರ್ವೆ ನಂಬರ್ 27/1 ರ ಉತ್ತರ ಭಾಗದಲ್ಲಿ ಒಂದು ಕಾಲುದಾರಿ ಇದೆ ಎಂದರೆ ಸಾಕ್ಷಿಯು ದಾವಾ ಕಾಲುದಾರಿಯನ್ನು ಬಂದ್ ಮಾಡಿ ಅಲ್ಲಿ ಹೊಸದಾಗಿ ನಿರ್ಮಾಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ನನ್ನ ಮನೆಯ ಮುಂದೆ ಒಂದು ಕಾಲುದಾರಿ ಇದ್ದು , ಸದ್ರಿ ಕಾಲುದಾರಿಯು ಸರ್ವೆ ನಂಬರ್ 27/1 ರ ಉತ್ತರ ಭಾಗದಲ್ಲಿ ಸೇರುತ್ತದೆ ಎಂದರೆ ಹೌದು . ಸಾಕ್ಷಿಯು ಮುಂದುವರಿದು ಅದು ಸಾರ್ವನಿಜಕರು ಓಡಾಟ ಮಾಡುವ ಕಾಲು ದಾರಿ ಎಂದು ನುಡಿಯುತ್ತಾರೆ . ಬೆಟ್ಟ ಸರ್ವೆ ನಂಬರ್ 55 ರ ದಕ್ಷಿಣ ಭಾಗದಲ್ಲಿ ಸಾಗರ - ಹೊನ್ನಾವರ ಮುಖ್ಯ ರಸ್ತೆಯು ಹಾದು ಹೋಗುತ್ತದೆ ಎಂದರೆ ಸದ್ರಿ ದಾರಿಯು ಸರ್ವೆ ನಂಬರ್ 55 ನ್ನು ದಾಟಿ ಸರ್ವೆ ನಂಬರ್ 50 ಅ ಇದರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ . ಸಾಕ್ಷಿಯು ಮುಂದುವರಿದು ಅದು ತೋಟಕ್ಕೆ ಹೋಗುವ ದಾರಿಯಾಗಿರುವುದಿಲ್ಲ ಅದು ಮುಖ್ಯ ರಸ್ತೆಯಾಗಿರುತ್ತದೆ ಎಂದು ನುಡಿಯುತ್ತಾರೆ .

ಸರ್ವೆ ನಂಬರ್ 28 ರಿಂದ 44 ವರೆಗೆ ಮಾಲ್ಕೀ ಜಮೀನುಗಳು ಇದ್ದು ಸದ್ರಿ ಜಮೀನುಗಳ ಪಶ್ಚಿಮಕ್ಕೆ ಬೇರೆ ಮಾಲ್ಕೀ ಜಮೀನುಗಳು ಇದ್ದಾವಾ ಎಂದರೆ ಇದೆ ಎಂದು ನುಡಿಯುತ್ತಾರೆ . ನನ್ನ ಮಾಲ್ಕಿ ಜಮೀನಿನ ದಕ್ಷಿಣಕ್ಕೆ ಮಾಲ್ಕಿ ಜಮೀನು ಇರುತ್ತದೆ ಎಂದರೆ ಸರಿಯಲ್ಲ . ಉಳಿದ ಮಾಲ್ಕೀ ಜಮೀನುಗಳು ಹಕ್ಕುದಾರರು ಸರ್ವೆ ನಂಬರ್ 27/1 ಉತ್ತರ ಭಾಗದಲ್ಲಿರುವ ಕಾಲುದಾರಿಯನ್ನು ಉಪಯೋಗಿಸುತ್ತಾ ಬರುತ್ತಿದ್ದಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿಯ ರಸ್ತೆಯನ್ನು ಪ್ರತಿವಾದಿಯವರು ಬಂದ್ ಮಾಡಿ ಸರ್ವೆ ನಂಬರ್ 27/1 ರ ಉತ್ತರ ಭಾಗದಲ್ಲ್ಲಿ ಕಾಲುದಾರಿಯನ್ನು ಈ ದಾವೆಯನ್ನು ಹೂಡಿದ ನಂತರ ನಿರ್ಮಾಣ ಮಾಡಲಾಗಿರುತ್ತದೆ ಆದರಿಂದ ಅದನ್ನು ಉಪಯೋಗಿಸುತ್ತಿದ್ದೇವೆ . ದಾವಾ ಕಾಲುದಾರಿ ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ . ದಾವಾ ರಸ್ತೆಯನ್ನು ಯಾರು ಯಾವುದೇ ಸಾರ್ವಜನಿಕರು ಉಪಯೋಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ . ದಾವಾ ರಸ್ತೆಯಿಂದ ಸರ್ವೆ ನಂಬರ್ 27/1 ರ ಹೊಸದಾಗಿ ನಿರ್ಮಿಸಿರುವ ಕಾಲುದಾರಿಯು ಸುಮಾರು 150 ಮೀ ದೂರದಲ್ಲಿರಬಹುದು . ದಾವಾ ರಸ್ತೆಯು ಎಷ್ಟು ಅಡಿ ಉದ್ದ ಮತ್ತು ಅಗಲ ಇದೆ ಎಂದು ಹೇಳಲು ನನಗೆ ಆಗುವುದಿಲ್ಲ. ನಿಪಿ-1 ಸರ್ವೆ ನಂಬರ್ 27/1 ಜಮೀನಿನಲ್ಲಿ ಯಾವುದೇ ಖರಾಬು ಜಾಗ ಇರುವುದಿಲ್ಲ ಎಂದರೆ

ಸರಿ . ಯಾವುದೇ ಜಮೀನಿನಲ್ಲಿ ಯಾವುದೇ ರಸ್ತೆ , ಹೊಳೆ ಇದ್ದಲ್ಲಿ ಸದ್ರಿ ಪಹಣಿ ಪತ್ರಿಕೆಯಲ್ಲಿ ಖರಾಬು ಎಂದು ತೋರಿಸಲಾಗುತ್ತದೆ ಎಂದರೆ ಸರಿ . ಅದೇ ರೀತಿ ನಿಪಿ-2 ಸರ್ವೆ ನಂಬರ್ 27/2 ರಲ್ಲಿ ಯಾವುದೇ ಖರಾಬು ಎಂದು ತೋರಿಸಲಾಗಿಲ್ಲ ಎಂದರೆ ಸರಿ . ಅದೇ ರೀತಿ ನಿಪಿ-3 ಸರ್ವೆ ನಂಬರ್ 27/3 ರಲ್ಲಿ

00-01-00 ಬಿ ಖರಾಬು ತೋರಿಸಲಾಗಿದೆ ಎಂದರೆ ಸರಿ . ದಾವಾ ರಸ್ತೆಯನ್ನು ತೋರಿಸಲು ಗ್ರಾಮ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ . ದಾವಾ ರಸ್ತೆಯು ತೋಟದ ಒಳಗೆ ಇರುವ ಕಾರಣ ಅದು ಗ್ರಾಮ ನಕಾಶೆಯಲ್ಲಿ ಕಂಡು ಬರುವುದಿಲ್ಲ . ನಾವು ಅನಾದಿಕಾಲದಿಂದಲೂ ಯಾವುದೇ ರಸ್ತೆಯನ್ನು ಉಪಯೋಗಿಸುತ್ತಾ ಬಂದಲ್ಲಿ ಅದು ತೋಟದ ಒಳಗೆ ಇದ್ದರೂ ಕೂಡಾ ಗ್ರಾಮ ನಕಾಶೆಯಲ್ಲಿ ನಮೂದು ಆಗುತ್ತದೆ ಎಂದರೆ ಸರಿಯಲ್ಲ . ಸರ್ವೆ ನಂಬರ್ 27/1 ರ ಉತ್ತರ ದಿಕ್ಕಿನಲ್ಲಿ ರಸ್ತೆ ಇದ್ದರೂ ಕೂಡಾ ನಾನು ನನ್ನ ಮನೆಗೆ ಹೋಗಲು ಹತ್ತಿರವಾಗುತ್ತದೆ ಎಂದು ಹೇಳಿ ದಾವಾ ರಸ್ತೆಯ ಮೇಲೆ ರಸ್ತೆ ಇದೆ ಎಂದು ಹೇಳಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ದಾವಾ ರಸ್ತೆಯು ಯಾವ ಕಾಲದಿಂದಲೂ ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ .

**ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯಾವಾದಿರವರು ಮುಂದುವರೆದ ಪಾಟಿ ಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**